**ಕರ್ನಾಟಕ ಸರ್ಕಾರ**

ಸಂಖ್ಯೆ: ಕೃಇ 70 ಎಎಇ 2026.

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:12-06-2026.

# ಅಧಿಸೂಚನೆ

ವಿಷಯ: ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು 2026ರ ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸಲು ವಿಮಾ ಘಟಕಗಳು, ಬೆಳೆಗಳು ಹಾಗೂ ಇತರೆ ವಿವರಗಳನ್ನು ಬೆಳೆವಿಮೆ ವ್ಯಾಪ್ತಿಗೆ ಒಳಪಡಿಸಲು ಅಧಿಸೂಚಿಸುವ ಬಗ್ಗೆ.

******

ಕೇಂದ್ರ ಸರ್ಕಾರದ ಪತ್ರ ಸಂ.18011/02/2023-Cr.II-Part(3) (FTS-189883), ದಿನಾಂಕ:26.05.2026 ರಲ್ಲಿ 2026-27ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು (PMFBY) ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕೃಇ 127 ಎಎಇ 2025, ದಿನಾಂಕ:04.03.2026 ರಲ್ಲಿ 2026-27ನೇ ಸಾಲಿನಿಂದ 2028-29ನೇ ಸಾಲಿನವರೆಗೆ ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ Complete Risk Transfer Mechanism (CRTM) ಮಾದರಿಯನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದ್ದು, ಅದರಂತೆ, 2026ರ ಮುಂಗಾರು ಹಂಗಾಮಿನಿಂದ CRTM ಮಾದರಿ ಅಳವಡಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸರ್ಕಾರದ "Operational Guidelines of PMFBY 2023" ರನ್ವಯ ಪ್ರಸ್ತುತ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ದಿನಾಂಕ:29.04.2026 ರಂದು ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ (SLCCCI) ಸಭೆಯ ತೀರ್ಮಾನದಂತೆ ರಾಜ್ಯದಲ್ಲಿ PMFBY ಮಾರ್ಗಸೂಚಿಯನ್ವಯ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು 2026-27ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿರುತ್ತದೆ.

ಕೃಷಿ ಆಯುಕ್ತರು ದಿನಾಂಕ:06.06.2026ರಂದು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, 2026-27ರ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ವಿವಿಧ ಬೆಳೆಗಳನ್ನು ತಾಲ್ಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಸೂಚಿಸುವಂತೆ ಕೋರಿರುತ್ತಾರೆ.

ರಾಜ್ಯದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಈ ಮುಂದಿನ ಅಂಶಗಳನ್ನೊಳಗೊಂಡಂತೆ ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

1. ಮುಖ್ಯ ಬೆಳೆಗಳನ್ನು ಹಾಗೂ ಇತರೆ ಬೆಳೆಗಳನ್ನು ತಾಲ್ಲೂಕುವಾರು ಪರಿಗಣಿಸುವುದು. ಆಯಾ ತಾಲ್ಲೂಕಿನಲ್ಲಿ ಮುಖ್ಯ ಬೆಳೆಗಳಿಗೆ ಗ್ರಾಮ ಪಂಚಾಯತಿ/ ನಗರ ಸ್ಥಳೀಯ ಸಂಸ್ಥೆಗಳನ್ನು ವಿಮಾ ಘಟಕವಾಗಿ ಹಾಗೂ ಇತರೆ ಬೆಳೆಗಳಿಗೆ ಹೋಬಳಿಯನ್ನು ವಿಮಾ ಘಟಕವಾಗಿ ಪರಿಗಣಿಸುವುದು. ಮುಂಗಾರು 2026ರ ಹಂಗಾಮಿನಲ್ಲಿ ಅಧಿಸೂಚಿಸುವ 36 ಆಹಾರ ಮತ್ತು ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳ ವಿಮಾ ಘಟಕಗಳ ಸಂಖ್ಯೆಯ ವಿವರ ಈ ಕೆಳಗಿನಂತಿರುತ್ತದೆ.

**2026-27 ರ ಮುಂಗಾರು ಹಂಗಾಮು**

| ಕ್ರಮ ಸಂಖ್ಯೆ | ಬೆಳೆಗಳು | ಹೋಬಳಿ ಗಳ ಸಂಖ್ಯೆ | ಗ್ರಾಮ ಪಂಚಾಯಿತಿ/ ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ |
|---|---|---|---|
| 1 | 2 | 3 | 4 |
| 1 | ಅರಿಶಿಣ | 39 | |
| 2 | ಅಲಸಂದೆ(ಮ.ಆ) | 76 | |
| 3 | ಆಲೂಗಡ್ಡೆ(ನೀ) | 9 | |
| 4 | ಆಲೂಗಡ್ಡೆ(ಮ.ಆ) | 15 | |
| 5 | ಈರುಳ್ಳಿ(ನೀ) | 122 | |
| 6 | ಈರುಳ್ಳಿ(ಮ.ಆ) | 65 | |
| 7 | ಉದ್ದು(ಮ.ಆ) | 103 | |
| 8 | ಎಲೆಕೋಸು | 11 | |
| 9 | ಎಳ್ಳು(ಮ.ಆ) | 78 | |
| 10 | ಕೆಂಪು ಮೆಣಸಿನಕಾಯಿ(ನೀ) | 41 | |
| 11 | ಕೆಂಪು ಮೆಣಸಿನಕಾಯಿ(ಮ.ಆ) | 25 | |
| 12 | ಜೋಳ(ನೀ) | 32 | |
| 13 | ಜೋಳ(ಮ.ಆ) | 49 | 53 |
| 14 | ಟೊಮ್ಯಾಟೊ | 163 | |
| 15 | ತೊಗರಿ(ನೀ) | 39 | 102 |
| 16 | ತೊಗರಿ(ಮ.ಆ) | 211 | 933 |
| 17 | ನವಣೆ(ಮ.ಆ) | 16 | |
| 18 | ನೆಲಗಡಲೆ (ಶೇಂಗಾ)(ನೀ) | 57 | 41 |
| 19 | ನೆಲಗಡಲೆ (ಶೇಂಗಾ)(ಮ.ಆ) | 141 | 447 |
| 20 | ಭತ್ತ(ನೀ) | 164 | 1226 |
| 21 | ಭತ್ತ(ಮ.ಆ) | 21 | 998 |
| 22 | ಮುಸುಕಿನ ಜೋಳ(ನೀ) | 184 | 639 |

| | | | |
|---|---|---|---|
| 23 | ಮುಸುಕಿನ ಜೋಳ(ಮ.ಆ) | 147 | 1421 |
| 24 | ರಾಗಿ(ನೀ) | 128 | |
| 25 | ರಾಗಿ(ಮ.ಆ) | 138 | 1190 |
| 26 | ಸಜ್ಜೆ(ನೀ) | 36 | |
| 27 | ಸಜ್ಜೆ(ಮ.ಆ) | 67 | 223 |
| 28 | ಸಾವೆ(ಮ.ಆ) | 8 | 1 |
| 29 | ಸೂರ್ಯಕಾಂತಿ(ನೀ) | 41 | |
| 30 | ಸೂರ್ಯಕಾಂತಿ(ಮ.ಆ) | 80 | 114 |
| 31 | ಸೋಯಾಅವರೆ(ನೀ) | 20 | |
| 32 | ಸೋಯಾಅವರೆ(ಮ.ಆ) | 48 | 283 |
| 33 | ಹತ್ತಿ(ನೀ) | 129 | |
| 34 | ಹತ್ತಿ(ಮ.ಆ) | 177 | 28 |
| 35 | ಹುರುಳಿ(ಮ.ಆ) | 176 | |
| 36 | ಹೆಸರು(ಮ.ಆ) | 137 | 344 |
| **ಒಟ್ಟು** | | **2993** | **8043** |

2. ಕೇಂದ್ರ ಸರ್ಕಾರದ ಮಾರ್ಗಸೂಚಿ ಸಂಖ್ಯೆ 7.2.1.1 ರಲ್ಲಿ ತಿಳಿಸಿದಂತೆ, ತಾಲ್ಲೂಕಿನಲ್ಲಿ ಒಂದು ಬೆಳೆಯನ್ನು ಮುಖ್ಯ ಬೆಳೆಯಯನ್ನಾಗಿ ಪರಿಗಣಿಸಲು ಹಾಗೂ ವಿಮಾ ಘಟಕದ ಮಟ್ಟವನ್ನು ನಿರ್ಧರಿಸಲು ಸದರಿ ಬೆಳೆಯ ವಿಸ್ತೀರ್ಣವು ಆಯಾ ತಾಲ್ಲೂಕಿನ ಒಟ್ಟು ಬೆಳೆ ಆವರಿಸಿದ ವಿಸ್ತೀರ್ಣದ ಶೇಕಡ 25 ರಷ್ಟು ಇರಬೇಕಾಗುತ್ತದೆ.

3. ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಸೂಚಿಸಬೇಕಾದರೆ, ಆ ಬೆಳೆಯ ವಿಸ್ತೀರ್ಣ ಸದರಿ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ 50 ಹೆಕ್ಟೇರ್ ಇರಬೇಕು. ಹೋಬಳಿ ಮಟ್ಟದಲ್ಲಿ ಬೆಳೆಗಳನ್ನು ಅಧಿಸೂಚಿಸಲು ಆ ಬೆಳೆಯ ವಿಸ್ತೀರ್ಣ ಸದರಿ ಹೋಬಳಿಯಲ್ಲಿ ಕನಿಷ್ಠ 125 ಹೆಕ್ಟೇರ್ (100 ಹೆಕ್ಟೇರ್-ತೋಟಗಾರಿಕೆ ಬೆಳೆಗಳಿಗೆ) ಇರತಕ್ಕದ್ದು.

4. 2026-27ನೇ ಸಾಲಿನ ಮುಂಗಾರು ಹಂಗಾಮಿನ ತಾಲ್ಲೂಕುವಾರು ಮುಖ್ಯ ಬೆಳೆಗಳ ಹಾಗೂ ಇತರೆ ಬೆಳೆಗಳ ಪಟ್ಟಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

5. ಮುಂಗಾರು ಹಂಗಾಮಿನ ವಿವಿಧ ಆಹಾರ, ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಬೆಳೆಗಳು ಮತ್ತು ತೋಟಗಾರಿಕಾ ಬೆಳೆವಾರು ವಿಮಾ ಘಟಕಗಳ ಮುಖ್ಯ ಬೆಳೆಗಳ (ಗ್ರಾಮ ಪಂಚಾಯಿತಿ ಬೆಳೆಗಳು) ಪಟ್ಟಿಯನ್ನು **ಅನುಬಂಧ-2** ರಲ್ಲಿ ಮತ್ತು ಇತರ ಬೆಳೆಗಳ (ಹೋಬಳಿ ಬೆಳೆಗಳು) ಪಟ್ಟಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.

6. ಮುಂಗಾರು ಹಂಗಾಮಿನ ಬೆಳೆಗಳಿಗೆ ನಿಗಧಿಪಡಿಸಲಾಗಿರುವ ಇಂಡೆಮ್ನಿಟಿ ಮಟ್ಟ, ವಿಮಾ ಮೊತ್ತ ಮತ್ತು ಶೇಕಡವಾರು ಗರಿಷ್ಠ ರೈತರ ಪಾಲಿನ ವಿಮಾ ಕಂತಿನ ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ.

7. 2026ರ ಮುಂಗಾರು ಹಂಗಾಮಿನ ಬೆಳೆಗಳಿಗೆ ಇಂಡೆಮ್ನಿಟಿ ಮೊತ್ತವನ್ನು ನೀರಾವರಿ ಬೆಳೆಗಳಿಗೆ ಶೇ.90 ಹಾಗೂ ಮಳೆ ಆಶ್ರಿತ ಬೆಳೆಗಳಿಗೆ ಶೇ.80 ಎಂದು ನಿಗದಿಪಡಿಸಲಾಗಿದೆ.

8. ಬೆಳೆ ಸಾಲ ಪಡೆಯುವ ಮತ್ತು ಬೆಳೆ ಸಾಲ ಪಡೆಯದ ರೈತರಿಗೆ ವಿಮಾ ಮೊತ್ತವು ಬೆಳೆವಾರು ಬೆಳೆ ಸಾಲದ ಪ್ರಮಾಣದ (Scale of finance) ಆಧಾರದ ಮೇಲೆ ನಿರ್ಧರಿಸಲಾಗಿದೆ.

9. ಪ್ರಾರಂಭಿಕ ಇಳುವರಿ (Threshold Yield) ಲೆಕ್ಕ ಹಾಕುವಾಗ ಹಿಂದಿನ 07 ವರ್ಷಗಳು ಅಂದರೆ 2019ನೇ ವರ್ಷದಿಂದ 2025ನೇ ವರ್ಷದವರೆಗಿನ ಇಳುವರಿಯನ್ನು ಪರಿಗಣಿಸಿ, ಇದರಲ್ಲಿ ಉತ್ತಮ 5 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸತಕ್ಕದ್ದು.

10. ಪ್ರಧಾನ ಮಂತ್ರಿ ಫಸಲ್ ಬಿಮಾ (PMFBY) ಯೋಜನೆಯಡಿ ಒಟ್ಟು ವಾಣಿಜ್ಯ ವಿಮಾ ಕಂತಿನ ದರದಲ್ಲಿ ರೈತರ ವಂತಿಗೆ ಹೊರತು ಪಡಿಸಿದ ನಂತರ ಉಳಿದ ವಿಮಾ ಕಂತಿನ ರಿಯಾಯಿತಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರವು 50:50 ಅನುಪಾತದಲ್ಲಿ ಸಮವಾಗಿ ಭರಿಸುತ್ತವೆ. ಆದರೆ, ಕೇಂದ್ರ ಸರ್ಕಾರವು Capping Limit ನಿಗದಿಪಡಿಸಿದ್ದು, ನೀರಾವರಿ ಜಿಲ್ಲೆಗಳ ಬೆಳೆಗಳಿಗೆ ವಿಮಾ ಕಂತಿನ ಶೇ.25 ರವರೆಗೆ ಹಾಗೂ ಮಳೆಯಾಶ್ರಿತ ಜಿಲ್ಲೆಗಳ ಬೆಳೆಗಳಿಗೆ ವಿಮಾ ಕಂತಿನ ಶೇ.30 ರವರೆಗೆ ಕೇಂದ್ರ ಸರ್ಕಾರವು ಭರಿಸುತ್ತದೆ. 2023-24ನೇ ಸಾಲಿನಿಂದ ರಾಜ್ಯ ಸರ್ಕಾರವು Capping Limit ನಿಗದಿಪಡಿಸಿದ್ದು, ಕೇಂದ್ರ ಸರ್ಕಾರದ Capping Limit ನಂತರ ಹೆಚ್ಚುವರಿಯಾಗಿ ಶೇ.10 ರಷ್ಟು ಭರಿಸುತ್ತದೆ. ಅಂದರೆ, ನೀರಾವರಿ ಜಿಲ್ಲೆಗಳ ಬೆಳೆಗಳಿಗೆ ವಿಮಾ ಕಂತಿನ ಶೇ.35 ರವರೆಗೆ ಹಾಗೂ ಮಳೆಯಾಶ್ರಿತ ಜಿಲ್ಲೆಗಳ ಬೆಳೆಗಳಿಗೆ ವಿಮಾ ಕಂತಿನ ಶೇ.40 ರವರೆಗೆ ಮಾತ್ರ ರಾಜ್ಯ ಸರ್ಕಾರವು ಭರಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ Capping limit ಮೀರಿದಂತಹ ಕೆಲವು ಜಿಲ್ಲಾ ಬೆಳೆ ಸಂಯೋಜನೆಗಳಲ್ಲಿ ವಿಮಾ ಕಂತಿನ ದರಗಳು ನಿಗದಿಯಾದಲ್ಲಿ ಅಂತಹ ಜಿಲ್ಲಾ ಬೆಳೆ ಸಂಯೋಜನೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಂತಿಗೆ ಹೊರತುಪಡಿಸಿದ ನಂತರ ಉಳಿದ ಮೊತ್ತವನ್ನು ರೈತರೇ ಭರಿಸಬೇಕಾಗುತ್ತದೆ (ನಿಗದಿಯಾದ ರೈತರ ವಂತಿಗೆಯೊಂದಿಗೆ). ವಿಮಾ ಕಂತಿನ ಮೊತ್ತವನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸುವ ವಿವಿಧ ವಿಮಾ ಸಂಸ್ಥೆಗಳಿಗೆ ನಿಯಮಾನುಸಾರ ಪಾವತಿಸಲು ಮಂಜೂರಾತಿ ನೀಡಲಾಗಿದೆ. ಜಿಲ್ಲಾವಾರು, ಬೆಳೆವಾರು ರೈತರು ಪಾವತಿಸಬೇಕಾದ ಪ್ರೀಮಿಯಂ ಮೊತ್ತದ ವಿವರವನ್ನು **ಅನುಬಂಧ-7** ರಲ್ಲಿ ನೀಡಿದೆ.

11. ಈ ಯೋಜನೆಯಡಿ ಪ್ರಸ್ತುತ ಸಾಲು ಹಾಗೂ ಹಂಗಾಮಿನಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ/ಪಡೆಯದ ರೈತರು ಯೋಜನೆಯಡಿ ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ ಬ್ಯಾಂಕ್ ಪಾಸ್ ಪುಸ್ತಕ ಮತ್ತು ಆಧಾರ್ ಸಂಖ್ಯೆ ನೀಡತಕ್ಕದ್ದು.

12. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ (PMFBY) ಮಾರ್ಗಸೂಚಿಯನ್ವಯ ಬ್ಯಾಂಕಿನಲ್ಲಿ ಬೆಳೆ ಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುವುದು. ತದನಂತರ ಬೆಳೆ ಸಾಲ ಪಡೆದ ರೈತರು ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛೆ ಪಡದೇ ಇದ್ದಲ್ಲಿ, ಈ ಕುರಿತು ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿ ಅಂತಿಮ ದಿನಾಂಕಕ್ಕಿಂತ 07 ದಿನಗಳ ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆ ವಿಮೆ ಯೋಜನೆಯಿಂದ ಕೈಬಿಡಲಾಗುವುದು. ಸಂಬಂಧಿಸಿದ ಬ್ಯಾಂಕ್ ಗಳು ಈ ರೀತಿ ಸ್ವೀಕರಿಸಲಾದ ಮುಚ್ಚಳಿಕೆ ಪತ್ರಗಳನ್ನು ಇತರೆ ದಾಖಲೆಗಳೊಂದಿಗೆ ವ್ಯವಸ್ಥಿತವಾಗಿ ನಿರ್ವಹಿಸತಕ್ಕದ್ದು.

13. ಬೆಳೆ ಸಾಲ ಪಡೆಯುವ ರೈತರಿಗೆ ಬೆಳೆ ವಿಮೆ ಯೋಜನೆಯಡಿ ನೋಂದಣಿ ಮಾಡಿದಲ್ಲಿ, ಮಂಜೂರಾದ ಬೆಳೆ ಸಾಲದ ಮೊತ್ತದ ಜೊತೆಗೆ ರೈತರ ವಿಮಾ ಕಂತನ್ನು ಹೆಚ್ಚುವರಿ ಸಾಲವನ್ನಾಗಿ ನಿಯಮಾನುಸಾರ ಮಂಜೂರು ಮಾಡತಕ್ಕದ್ದು.

14. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿಗಳನ್ವಯ ಆರ್ಥಿಕ ಸಂಸ್ಥೆಗಳು/ ಬ್ಯಾಂಕ್/ ಗ್ರಾಮ-ಒನ್ ಕೇಂದ್ರ (Grama-one centres) / ಸಾಮಾನ್ಯ ಸೇವಾ ಕೇಂದ್ರ (Common Service Centers) ಗಳಲ್ಲಿ ರೈತರನ್ನು ಬೆಳೆ ವಿಮೆಗೆ ನೋಂದಾಯಿಸಿದಾಗ, ಬೆಳೆ ವಿಮೆ ಪ್ರಸ್ತಾವನೆಗಳನ್ನು ಹಾಗೂ ವಿಮಾ ಕಂತನ್ನು ನಿಗದಿತ ಸಮಯದೊಳಗೆ ನಿಯಮಾನುಸಾರ ಅನುಷ್ಠಾನ ವಿಮಾ ಸಂಸ್ಥೆಗಳಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳತಕ್ಕದ್ದು. ನೋಂದಣಿ ಪ್ರಕ್ರಿಯೆಯ ಹಂತದಲ್ಲಿ ಮೇಲೆ ತಿಳಿಸಿದ ಸಂಸ್ಥೆಗಳ ನಿರ್ಲಕ್ಷ್ಯದಿಂದ ಯಾವುದೇ ಲೋಪ ದೋಷಗಳು ಉಂಟಾದಲ್ಲಿ ಅದರಿಂದಾಗುವ ಬೆಳೆ ವಿಮೆ ಪರಿಹಾರ ವ್ಯಾಜ್ಯಗಳಿಗೆ ಸಂಬಂಧಿಸಿದ ಸಂಸ್ಥೆಗಳೇ ನೇರ ಹೊಣೆಗಾರರಾಗಿರುತ್ತಾರೆ.

15. 2026ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆಗೆ ನೋಂದಾಯಿಸಲು ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಜಿಲ್ಲಾವಾರು ಹಾಗೂ ಬೆಳೆವಾರು ಕೊನೆಯ ದಿನಾಂಕವನ್ನು, ಬಿತ್ತನೆ ಅವಧಿ ಮತ್ತು ಕಟಾವು ಅವಧಿಯನ್ನು ಹಾಗೂ ಗ್ರಾಮ ಪಂಚಾಯತಿ ವಿಮಾ ಘಟಕಗಳಲ್ಲಿ ಬಿತ್ತನೆ ವಿಫಲಗೊಂಡಲ್ಲಿ/ಮೊಳಕೆ ಬಾರದಿದ್ದರೆ Prevented sowing/Planting Risk invoke ಮಾಡಲು ಕೊನೆಯ ದಿನಾಂಕಗಳನ್ನು ಪ್ರತ್ಯೇಕ ಆದೇಶದ ಮೂಲಕ ಅಧಿಸೂಚಿಸಲಾಗುವುದು.

16. ಈ ಯೋಜನೆಯಡಿಯಲ್ಲಿ ಬೆಳೆ ಸಾಲ ಪಡೆಯದ ರೈತರು ಅಂದಾಜು/ಉಪೇಕ್ಷಿತ ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲೇ ಪಾಲ್ಗೊಳ್ಳಬಹುದು. ಬೆಳೆ ಸಾಲ ಪಡೆಯದ ರೈತರು ಬೆಳೆ ವಿಮೆಗೆ ನೋಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದ್ದಲ್ಲಿ ಹಾಗೂ ಬೆಳೆ ಸಾಲ ಪಡೆದ ರೈತರು ಸಾಲದ ಅರ್ಜಿಯಲ್ಲಿ ನಮೂದಿಸಿದ ಬೆಳೆ ಬದಲಾಗಿ ಬೇರೆ ಬೆಳೆ ಬಿತ್ತನೆ ಮಾಡಿದ್ದಲ್ಲಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿದ ಅವಧಿಯೊಳಗಾಗಿ *(ಅಂದರೆ, ಜಿಲ್ಲಾವಾರು, ಬೆಳೆವಾರು ನೋಂದಣಿ ಕೊನೆಯ ದಿನಾಂಕಕ್ಕೆ 2 ದಿನಗಳ ಮುಂಚಿತವಾಗಿ)* ನೋಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣ ಪತ್ರ ನೀಡಿ ವಿಮೆ ನೋಂದಾಯಿಸಿದ ಬೆಳೆಯನ್ನು ಬದಲಾಯಿಸತಕ್ಕದ್ದು. ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸತಕ್ಕದ್ದು ಅಥವಾ ಹೆಚ್ಚುವರಿ ವಿಮಾ ಕಂತನ್ನು ಪಾವತಿಸಿದ್ದಲ್ಲಿ ರೈತರಿಗೆ ಸಂಸ್ಥೆಗಳಿಂದ ಮರುಪಾವತಿಸತಕ್ಕದ್ದು.

17. ಆರ್ಥಿಕ ಸಂಸ್ಥೆಗಳು/ಬ್ಯಾಂಕುಗಳು *"ಸಂರಕ್ಷಣೆ"* ತಂತ್ರಾಂಶದ ಮೂಲಕ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಸಂಬಂಧಿಸಿದ ಪ್ರಸ್ತಾವನೆಗಳ ವಿವರಗಳನ್ನು ಪೋರ್ಟಲ್ ನಲ್ಲಿ ದಾಖಲಿಸಲು ಹಾಗೂ ರೈತರ ಪ್ರಸ್ತಾವನೆಗಳನ್ನು ಮತ್ತು ವಿಮಾ ಕಂತಿನ ಮೊತ್ತವನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸಲು ರೈತರು ನೋಂದಣಿ ಮಾಡುವ ಕೊನೆಯ ದಿನಾಂಕದಿಂದ 15 ದಿನಗಳೊಳಗಾಗಿ ಅಂತಿಮಗೊಳಿಸತಕ್ಕದ್ದು.

18. ಆರ್ಥಿಕ ಸಂಸ್ಥೆಗಳು/ಬ್ಯಾಂಕುಗಳಿಗೆ ವಿಮಾ ಸಂಸ್ಥೆಯು ರೈತರ ವಿಮಾ ಕಂತಿನ ಮೊತ್ತದಲ್ಲಿ ಶೇ.4 ರಷ್ಟನ್ನು ಸೇವಾ ಶುಲ್ಕವಾಗಿ ನೀಡತಕ್ಕದ್ದು.

19. ಸಾಮಾನ್ಯ ಸೇವಾ ಕೇಂದ್ರ (Common Service Centers) ಹಾಗೂ ಗ್ರಾಮ-ಒನ್ ಕೇಂದ್ರ (Grama-one centres) ಗಳಲ್ಲಿ ನೋಂದಾಯಿಸಿದ ಬೆಳೆ ಸಾಲ ಪಡೆಯದ ರೈತರ ವಿವರಗಳನ್ನು *"ಸಂರಕ್ಷಣೆ"* ತಂತ್ರಾಂಶದಲ್ಲಿ ದಾಖಲಿಸಲು ಹಾಗೂ ರೈತರ ಪ್ರಸ್ತಾವನೆಗಳನ್ನು ಮತ್ತು ವಿಮಾ ಕಂತಿನ ಮೊತ್ತವನ್ನು ವಿಮಾ ಸಂಸ್ಥೆಗಳಿಗೆ ವರ್ಗಾಯಿಸಲು ರೈತರು ನೋಂದಣಿ ಮಾಡುವ ಕೊನೆಯ ದಿನಾಂಕದಂದೇ ಅಂತಿಮಗೊಳಿಸತಕ್ಕದ್ದು.

20. ಸಾಮಾನ್ಯ ಸೇವಾ ಕೇಂದ್ರ (Common Service Centers) ಹಾಗೂ ಗ್ರಾಮ-ಒನ್ ಕೇಂದ್ರ (Grama-one centres) ಗಳಲ್ಲಿ ನೋಂದಾಯಿಸಿದ ಬೆಳೆ ಸಾಲ ಪಡೆಯದ ರೈತರ ವಿವರಗಳನ್ನು ಪೋರ್ಟಲ್ ನಲ್ಲಿ ದಾಖಲಿಸಲು ಪ್ರತಿ ಅರ್ಜಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ

ಸೇವಾ ಶುಲ್ಕವನ್ನು ವಿಮಾ ಸಂಸ್ಥೆಯು ಸಾಮಾನ್ಯ ಸೇವಾ ಕೇಂದ್ರಗಳಿಗೆ ಹಾಗೂ ಗ್ರಾಮ-ಒನ್ ಕೇಂದ್ರಗಳಿಗೆ ನೀಡತಕ್ಕದ್ದು.

21. ಬ್ಯಾಂಕುಗಳು ಅಧಿಕೃತವಾಗಿ ವಿಮೆಗೆ ನೋಂದಾಯಿಸಿದ ರೈತರ ಎಲ್ಲಾ ವಿವರಗಳುಳ್ಳ ಪ್ರಸ್ತಾವನೆಯನ್ನು *"ಸಂರಕ್ಷಣೆ"* ತಂತ್ರಾಂಶದಲ್ಲಿ ಅಳವಡಿಸಿ, ವಿಮಾ ಸಂಸ್ಥೆಗೆ ಸಲ್ಲಿಸತಕ್ಕದ್ದು. ಅಲ್ಲಿಯವರೆಗೆ ಬ್ಯಾಂಕುಗಳಿಗೆ ವಿಮಾ ಸಂಸ್ಥೆಗಳು ಸೇವಾ ಶುಲ್ಕವನ್ನು ಬಿಡುಗಡೆ ಮಾಡಬಾರದು.

22. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ರೈತರ ಖಾತೆಗೆ ಜಮೆ ಮಾಡಿದ ವಿವರಗಳನ್ನು ಬ್ಯಾಂಕುಗಳಿಗೆ ಹಾಗೂ ಸಂಬಂಧಿಸಿದ ಜಿಲ್ಲಾ ಕಚೇರಿಗಳಿಗೆ ನೀಡತಕ್ಕದ್ದು ಹಾಗೂ ಬ್ಯಾಂಕುಗಳು/ ಜಿಲ್ಲಾ ಕಚೇರಿಗಳು ಈ ವಿವರಗಳನ್ನು ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು.

23. ನೆರೆ/ಪ್ರವಾಹಗಳಿಂದ ಬೆಳೆ ಹಾನಿ ಆಗಿರುವ ಪ್ರದೇಶದಲ್ಲಿ, ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮೆಗಾಗಿ ನೋಂದಾಯಿಸಿದ್ದ ರೈತರಿಗೆ ಸೂಕ್ತ ಪರಿಹಾರವನ್ನು ನೀಡುವುದಕ್ಕಾಗಿ ವಿಮಾ ಕಂಪನಿಗಳಿಂದ ಕ್ಲೇಮುಗಳನ್ನು ಇತ್ಯರ್ಥಪಡಿಸಲು "Prevented Sowing Risk", "On Account payment due to Midseason Adversity", "Localised Risk" ಹಾಗೂ "Post Harvest Loss" ಅಡಿ ಜಿಲ್ಲಾ ಮಟ್ಟದ ಜಂಟಿ ಸಮಿತಿ ರಚಿಸಿ, ಕೈಗೊಳ್ಳಬೇಕಾಗಿರುವ ಕ್ರಮಗಳ ಕುರಿತು ಕೃಷಿ ಆಯುಕ್ತರು ಹೊರಡಿಸಿರುವ ಸುತ್ತೋಲೆಯನ್ನು **ಅನುಬಂಧ-5** ರಲ್ಲಿ ನೀಡಿದೆ.

24. 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಅಧಿಸೂಚಿತ ಘಟಕದಲ್ಲಿ ಶೇಕಡಾ 75 ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ (Prevented sowing/Planting Risk) ವಿಮಾ ಮೊತ್ತದ ಗರಿಷ್ಟ ಶೇಕಡಾ 25 ರಷ್ಟು ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥಪಡಿಸಿ, ಮುಂದಿನ ಅವಧಿಗೆ ವಿಮೆಯನ್ನು ರದ್ದುಪಡಿಸತಕ್ಕದ್ದು. ಈ ಸಂಬಂಧ ಬಿತ್ತನೆ ಕ್ಷೇತ್ರದ ವರದಿಯನ್ನು ಘೋಷಿಸಲು ಹಾಗೂ ಅಗತ್ಯ ದಾಖಲೆಗಳಾದ ಮಳೆ ಮತ್ತು ಇತರೆ ಹವಾಮಾನದ ವರದಿಯನ್ನು ನೀಡಲು ಜಿಲ್ಲೆಗಳ ಜಿಲ್ಲಾಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಇಂತಹ ಸಂದರ್ಭಗಳು ಉದ್ಭವವಾದಲ್ಲಿ ವಿಮಾ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಇಲಾಖಾ ಅಧಿಕಾರಿಗಳು ಸೇರಿದಂತೆ ಮಾರ್ಗಸೂಚಿಯನ್ವಯ ಜಂಟಿ ಸಮೀಕ್ಷೆಯನ್ನು ಕೈಗೊಂಡು ವರದಿಯನ್ನು ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ Prevented sowing/Planting Risk invoke ಮಾಡುವ ಕೊನೆಯ ದಿನಾಂಕದ 07 ದಿನಗಳು ಮುಂಚಿತವಾಗಿ ಕೃಷಿ ಇಲಾಖೆಯ ಕೇಂದ್ರ ಕಚೇರಿಗೆ ನಿಗದಿತ ನಮೂನೆಯಲ್ಲಿ **[ಅನುಬಂಧ-5 (a)]** ಸಲ್ಲಿಸತಕ್ಕದ್ದು. ಜಿಲ್ಲೆಗಳಿಂದ ಪ್ರಸ್ತಾವನೆಗಳು ಸ್ವೀಕೃತವಾದ ನಂತರ, ಪ್ರಸ್ತಾವನೆಗಳನ್ನು ಮಾರ್ಗಸೂಚಿಯನ್ವಯ ಕೃಷಿ ಆಯುಕ್ತರ ಹಂತದಲ್ಲಿ ಪರಶೀಲಿಸಿ Prevented sowing/ Planting Risk ನ್ನು ಬೆಳೆ ವಿಮಾ ಘಟಕವಾರು ಅಧಿಸೂಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

25. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ Prevented sowing/Planting Risk ನ್ನು ಬೆಳೆ ವಿಮಾ ಘಟಕವಾರು ಅಧಿಸೂಚಿಸಿ invoke ಮಾಡಿದ ನಂತರ ಒಂದು ತಿಂಗಳೊಳಗೆ ವಿಮಾ ಸಂಸ್ಥೆಯು ವಿಮೆಗೆ ನೋಂದಾಯಿಸಿದ ರೈತರಿಗೆ ಮೇಲಿನಂತೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

26. 2026-27ರ ಮುಂಗಾರು ಹಂಗಾಮಿನಲ್ಲಿ ಅಧಿಸೂಚಿತ ಘಟಕದಲ್ಲಿ ಸಂಭವಿಸುವ ಹವಾಮಾನ ವೈಪರೀತ್ಯಗಳಾದ ಹೆಚ್ಚಿನ ಮಳೆ, ನೆರೆ/ಪ್ರವಾಹಗಳಿಂದ ಬೆಳೆ ಮುಳುಗಡೆ, ದೀರ್ಘಕಾಲದ

ತೇವಾಂಶ ಕೊರತೆ (Prolonged dry spell), ತೀವ್ರ ಬರಗಾಲದಿಂದ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು (On Account payment due to Mid Season Adversity), ನಿರೀಕ್ಷಿತ ಇಳುವರಿಯು ಸಾಮಾನ್ಯ ಇಳುವರಿಯ (07 ವರ್ಷಗಳ ಸರಾಸರಿ) ಶೇಕಡಾ 50 ಕ್ಕಿಂತ ಕಡಿಮೆ ಇದ್ದರೆ, ವಿಮೆಗೆ ನೋಂದಾಯಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25 ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡತಕ್ಕದ್ದು. ಈ ಬಗ್ಗೆ ವರದಿಯನ್ನು ನೀಡಲು ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ವಿಮಾ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಇಲಾಖಾ ಅಧಿಕಾರಿಗಳು ಸೇರಿದಂತೆ ಮಾರ್ಗಸೂಚಿಯನ್ವಯ ಜಂಟಿ ಸಮೀಕ್ಷೆಯನ್ನು ಕೈಗೊಂಡು ವರದಿಯನ್ನು ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಕೃಷಿ ಇಲಾಖೆಯ ಕೇಂದ್ರ ಕಚೇರಿಗೆ ನಿಗದಿತ ನಮೂನೆಯಲ್ಲಿ **(ಅನುಬಂಧ-5(b))** ಸಲ್ಲಿಸತಕ್ಕದ್ದು. ಅಂತಿಮವಾಗಿ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಬೆಳೆ ಇಳುವರಿ ಮಾಹಿತಿ ಬಂದನಂತರ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಈ ಹಣವನ್ನು ಹೊಂದಾಣಿಕೆ ಮಾಡತಕ್ಕದ್ದು.

27. "On-Account Payment of Claims due to Mid-Season Adversity" invoke ಮಾಡಲು PMFBY Operational Guidelines, 2023ರ Para No. 21.4 ನ್ನು ಪರಿಗಣಿಸಿ ಈ ಕೆಳಗಿನ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ:

    ಅ) ಬೆಳೆಯು ಬಿತ್ತನೆಯಾಗಿ ಒಂದು ತಿಂಗಳು ಆಗಿರಬೇಕು (more than one month old crop) ಮತ್ತು ಬೆಳೆ ಕಟಾವಿಗಿಂತ 15 ದಿನಕ್ಕಿಂತ ಮುಂಚಿತವಾಗಿರಬೇಕು.

    ಆ) ಮೇಲೆ ತಿಳಿಸಿರುವ ಯಾವುದೇ ಹವಾಮಾನ ವೈಪರೀತ್ಯಗಳು ಉಂಟಾದ 07 ದಿನಗಳೊಳಗೆ ಮೇಲಿನ ಸಮಿತಿಯು ಸಭೆ ಆಯೋಜಿಸತಕ್ಕದ್ದು.

    ಇ) ಒಂದು ವಿಮಾ ಘಟಕದಲ್ಲಿ 10 ವಿವಿಧ ಅನಿಯಿತ ಸ್ಥಳಗಳಲ್ಲಿ (randomnly spread over locations) ನಷ್ಟದ ಮೌಲ್ಯಮಾಪನವನ್ನು ಸಭೆ ಆಯೋಜಿಸಿದ 07 ದಿನಗಳೊಳಗೆ ಕೈಗೊಳ್ಳತಕ್ಕದ್ದು.

    ಈ) ನಿಗದಿತ ನಮೂನೆಯಲ್ಲಿ **[ಅನುಬಂಧ-5(b)]** ನೀಡಿರುವಂತೆ ನಷ್ಟದ ಮೌಲ್ಯಮಾಪನ ಮಾಡಿದ ವರದಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸತಕ್ಕದ್ದು ಮತ್ತು ಸರ್ಕಾರದಿಂದ 07 ದಿನಗಳೊಳಗಾಗಿ Mid-Season Adversity ಬಗ್ಗೆ ಅಧಿಸೂಚನೆ ಹೊರಡಿಸಲಾಗುವುದು.

    ಉ) ಕೇಂದ್ರ ಕಚೇರಿಯಲ್ಲಿ ಜಿಲ್ಲೆಗಳಿಂದ ಸ್ವೀಕೃತವಾದ ವರದಿಗಳನ್ನು ಪರಿಶೀಲಿಸಿ, *"ಸಂರಕ್ಷಣೆ"* ತಂತ್ರಾಂಶದ ಮುಖಾಂತರ ಮಧ್ಯಂತರ ವಿಮಾ ಪರಿಹಾರವನ್ನು ಲೆಕ್ಕಾಚಾರ ಹಾಕತಕ್ಕದ್ದು.

    ಊ) ಲೆಕ್ಕಾಚಾರದ ನಂತರ ಹದಿನೈದು ದಿನಗಳೊಳಗಾಗಿ ಅನುಷ್ಠಾನ ವಿಮಾ ಸಂಸ್ಥೆಯವರು ಮಧ್ಯಂತರ ವಿಮಾ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

28. ಮೇಲೆ ವಿವರಿಸಿದ ಎರಡು ಬೆಳೆ ವಿಮೆ ಪರಿಹಾರ ಪ್ರಕ್ರಿಯೆಗಳಾದ Prevented sowing ಮತ್ತು Midseason Adversity ಕ್ಷೇತ್ರಾಧಾರಿತವಾಗಿರುತ್ತವೆ.

29. Prevented sowing/Planting Risk ಹಾಗೂ On Account payment due to Mid Season Adversity ಪ್ರಕರಣಗಳನ್ನು ನಿರ್ಧರಿಸುವಾಗ ಕೃಷಿ ಆಯುಕ್ತರು ಹೊರಡಿಸಿದ ಸುತ್ತೋಲೆ ಸಂಖ್ಯೆ: ಜಕೃನಿ(ಬೆವಿ)/PMFBY/ಮುಂ2025/ ಅಧಿಸೂಚನೆ/4/2025-26; ದಿನಾಂಕ:08.05.2025 **(ಅನುಬಂಧ-5(a), 5(b))** ರಂತೆ ಕ್ರಮ ಕೈಗೊಳ್ಳತಕ್ಕದ್ದು.

30. ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ (Localized calamity) ಆಲಿಕಲ್ಲು, ಮಳೆ, ಭೂ ಕುಸಿತ, ಬೆಳೆ ಮುಳುಗಡೆ (Inundation), ಮೇಘಸ್ಫೋಟ (cloud burst) ಮತ್ತು ಗುಡುಗು-ಮಿಂಚುಗಳಿಂದಾಗಿ ಆಗುವ ಬೆಂಕಿ ಅವಘಡ (Natural fire due to lighting) ಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವ್ಯಕ್ತಿಗತವಾಗಿ ನಿರ್ಧರಿಸಿ, ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಯೋಜನೆಯಡಿ ಅವಕಾಶ ನೀಡಲಾಗಿದೆ.

31. ಒಂದು ವೇಳೆ ಒಂದು ಅಧಿಸೂಚಿತ ಘಟಕದಲ್ಲಿ ಶೇಕಡಾ 25 ಕ್ಕಿಂತ ಹೆಚ್ಚು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾದರೆ (Widespread Localised Calamities) ಆ ಅಧಿಸೂಚಿತ ಘಟಕದಲ್ಲಿ ಬೆಳೆ ವಿಮೆಗೆ ಒಳಪಟ್ಟ ರೈತರ ಪೈಕಿ ಬೆಳೆ ನಷ್ಟದ ಕುರಿತು ವರದಿ ಮಾಡಿದ ರೈತರಿಗೆ ಮಾತ್ರ ಮಾದರಿ ಸಮೀಕ್ಷೆಗನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು. Widespread Localised Calamities ಅಡಿಯಲ್ಲಿ ವಿಮೆಗೆ ನೋಂದಾಯಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25 ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡತಕ್ಕದ್ದು. ಅಂತಿಮವಾಗಿ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಬೆಳೆ ಇಳುವರಿ ಮಾಹಿತಿ ಬಂದನಂತರ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಈ ಹಣವನ್ನು ಹೊಂದಾಣಿಕೆ ಮಾಡತಕ್ಕದ್ದು.

32. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ಬೆಳೆ ವಿಮೆಗೆ ನೋಂದಾಯಿಸಿದ ರೈತರು ಈ ಬಗ್ಗೆ ನೇರವಾಗಿ ಸಂಬಂಧಪಟ್ಟ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಚೇರಿಗಳಿಗೆ ಅಥವಾ ಹಣಕಾಸು ಸಂಸ್ಥೆ ಅಥವಾ ಕೃಷಿ/ತೋಟಗಾರಿಕೆ ಇಲಾಖೆ ಮೂಲಕ ತಕ್ಷಣ ಸೂಚನೆ ನೀಡತಕ್ಕದ್ದು. ಇಂತಹ ಸಂದರ್ಭದಲ್ಲಿ ವಿಮೆಗೆ ನೋಂದಾಯಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಗಳೊಳಗಾಗಿ ತಿಳಿಸತಕ್ಕದ್ದು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ನಂತರ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ 48 ಗಂಟೆಯೊಳಗಾಗಿ ನಿಯೋಜಿಸತಕ್ಕದ್ದು.

33. ವಿಮಾ ಸಂಸ್ಥೆಯಿಂದ ನೇಮಿಸಲ್ಪಟ್ಟ ನಷ್ಟ ನಿರ್ಧಾರಕರು ಮತ್ತು ಸ್ಥಳೀಯ ತಾಲ್ಲೂಕು/ಹೋಬಳಿ ಮಟ್ಟದ ಕಂದಾಯ, ಕೃಷಿ ಮತ್ತು ತೋಟಗಾರಿಕಾ ಇಲಾಖಾ ಅಧಿಕಾರಿಗಳು ಜಂಟಿಯಾಗಿ, ಹಾನಿಗೊಳಗಾದ ರೈತರ ಸಮ್ಮುಖದಲ್ಲಿ ಬೆಳೆ ನಷ್ಟವನ್ನು ನಿರ್ಧರಿಸತಕ್ಕದ್ದು. ಸದರಿ ಬೆಳೆ ನಷ್ಟದ ವರದಿಯನ್ನು ಜಿಲ್ಲೆಗಳ ಇಲಾಖಾ ಮುಖ್ಯಸ್ಥರು ಅನುಷ್ಠಾನ ವಿಮಾ ಸಂಸ್ಥೆಗಳಿಗೆ ನೇರವಾಗಿ ಸಲ್ಲಿಸಲು ಕ್ರಮ ಕೈಗೊಳ್ಳತಕ್ಕದ್ದು.

34. 2026ರ ಮುಂಗಾರು ಹಂಗಾಮಿನಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೇ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ (Post Harvest Losses) ಕಟಾವು ಕೈಗೊಳ್ಳುವ ಎರಡು ವಾರಗಳೊಳಗಾಗಿ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯಕ್ತಿಕವಾಗಿ (case to case basis) ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸಲಾಗಿದೆ. ರೈತರು ಈ ಬಗ್ಗೆ ಸಂಬಂಧಪಟ್ಟ ಆರ್ಥಿಕ ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಚೇರಿಗಳಿಗೆ ನೇರವಾಗಿ ಅಥವಾ ಕೃಷಿ/ತೋಟಗಾರಿಕೆ ಇಲಾಖೆಯ ಮೂಲಕ ತಕ್ಷಣ ಮಾಹಿತಿ (Intimation) ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಿ ಬೆಳೆ ವಿಮೆಗೆ ನೋಂದಾಯಿಸಿದ ಬೆಳೆಯ ವಿವರಗಳನ್ನು ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಯೊಳಗಾಗಿ ತಿಳಿಸತಕ್ಕದ್ದು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ನಂತರ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ 48 ಗಂಟೆಯೊಳಗಾಗಿ ನಿಯೋಜಿಸತಕ್ಕದ್ದು.

35. ಕಟಾವು ನಂತರ ಜಮೀನಿನಲ್ಲಿ ಒಣಗಲು ಹಾಕಲಾಗುವ ಮುಂಗಾರು ಹಂಗಾಮಿಗೆ ಅಧಿಸೂಚಿತ ಬೆಳೆಗಳ ವಿವರವನ್ನು **ಅನುಬಂಧ-6(i)** ರಲ್ಲಿ ನೀಡಲಾಗಿದೆ.

36. ವಿಮಾ ಸಂಸ್ಥೆಯಿಂದ ನೇಮಿಸಲ್ಪಟ್ಟ ನಷ್ಟ ನಿರ್ಧಾರಕರು ಮತ್ತು ಸ್ಥಳೀಯ ತಾಲ್ಲೂಕು/ಹೋಬಳಿ ಮಟ್ಟದ ಕಂದಾಯ, ಕೃಷಿ ಮತ್ತು ತೋಟಗಾರಿಕಾ ಇಲಾಖಾ ಅಧಿಕಾರಿಗಳು ಜಂಟಿಯಾಗಿ, ಹಾನಿಗೊಳಗಾದ ರೈತರ ಸಮ್ಮುಖದಲ್ಲಿ ಬೆಳೆ ನಷ್ಟವನ್ನು ನಿರ್ಧರಿಸತಕ್ಕದ್ದು.

37. ಸದರಿ ಬೆಳೆ ನಷ್ಟದ ವರದಿಯನ್ನು ಜಿಲ್ಲೆಗಳ ಇಲಾಖಾ ಮುಖ್ಯಸ್ಥರು, ಅನುಷ್ಠಾನ ವಿಮಾ ಸಂಸ್ಥೆಗಳಿಗೆ ನೇರವಾಗಿ ಸಲ್ಲಿಸಲು ಕ್ರಮಕೈಗೊಳ್ಳತಕ್ಕದ್ದು. ಇದರನ್ವಯ ಬೆಳೆ ವಿಮೆ ಪರಿಹಾರ ಇತ್ಯರ್ಥಪಡಿಸುವಲ್ಲಿ ವಿಮಾ ಸಂಸ್ಥೆಗಳು ತಕ್ಷಣ ಕ್ರಮವಹಿಸತಕ್ಕದ್ದು.

38. ಕೇಂದ್ರ ಸರ್ಕಾರದ Operational Guidelines of PMFBY, 2023 ರನ್ವಯ ಪ್ರಕೃತಿ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲಗೊಂಡಲ್ಲಿ, ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಿದ ನಂತರ ಪಾವತಿಯಾದ ವಿಮಾ ಪರಿಹಾರ ಮೊತ್ತವನ್ನು ಒಟ್ಟು ವಿಮಾ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತದೆ. ಇದೇ ರೀತಿ ವಿವಿಧ ವಿಪತ್ತುಗಳಿಗೆ ಪಾವತಿ ಮಾಡುವ ವಿಮಾ ಪರಿಹಾರ ಮೊತ್ತವನ್ನು ಒಟ್ಟು ವಿಮಾ ಮೊತ್ತದಲ್ಲಿ ಕಡಿತಗೊಳಿಸಲಾಗುತ್ತದೆ. ಅಂತಿಮ ಇಳುವರಿ ಆಧಾರಿತ ವಿಮಾ ಪರಿಹಾರ ಮೊತ್ತವನ್ನು ಲೆಕ್ಕಾಚಾರ ಮಾಡುವಾಗ, ಇಳುವರಿ ಕೊರತೆಯನ್ನು ಲಭ್ಯವಿರುವ ವಿಮಾ ಮೊತ್ತದೊಂದಿಗೆ ಗುಣಿಸಿ, ಲೆಕ್ಕಾಚಾರ ಮಾಡಲಾಗುವುದು. ಅಂತೆಯೇ, ಒಂದು ಪ್ರಸ್ತಾವನೆಯಲ್ಲಿ ಬಹು ಗಂಡಾಂತರ ನಷ್ಟ ಸಂಭವಿಸಿದಾಗ ಉಲ್ಲೇಖಿತ ಮಾರ್ಗಸೂಚಿಯನ್ವಯ ಕ್ರಮವಹಿಸಲಾಗುವುದು.

39. ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡು ಹಿಡಿಯಲಾದ ಇಳುವರಿ ಮಾಹಿತಿಯನ್ನು ಮಾತ್ರ ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಿ ಇತ್ಯರ್ಥಪಡಿಸತಕ್ಕದ್ದು. ಇತರೆ ಇಳುವರಿ ಅಂದಾಜು ಮಾಡುವಂತಹ ವಿಧಾನಗಳಾದ ಆಣೆವಾರಿ ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇಲಾಖೆ ಅಥವಾ ಸಂಸ್ಥೆ, ಕ್ಷಾಮ, ಬರ, ಪ್ರವಾಹ ಎಂದು ಘೋಷಿಸಿ ಇಳುವರಿ ನಷ್ಟವನ್ನು ಅಂದಾಜು ಮಾಡುವ ಮಾಹಿತಿಯನ್ನು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲು ಪರಿಗಣಿಸತಕ್ಕದ್ದಲ್ಲ.

40. 2026-27ರ ಮುಂಗಾರು ಹಂಗಾಮಿನಲ್ಲಿ ಯಾವುದೇ ಅಧಿಸೂಚಿತ ವಿಮಾ ಘಟಕದಲ್ಲಿ ಅವಶ್ಯಕತೆಗೆ ತಕ್ಕಂತೆ ಬೆಳೆ ವಿಸ್ತೀರ್ಣ ಲಭ್ಯವಿಲ್ಲದ ಕಾರಣ ಯಾವುದೇ ಬೆಳೆಗೆ ನಿಗದಿಪಡಿಸಿದ ಸಂಖ್ಯೆಯ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ, ಈ ಕೆಳಗಿನ ಆದ್ಯತಾ ಕ್ರಮಾಂಕದನ್ವಯ ಇಳುವರಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಪರಿಗಣಿಸಿ ನೀಡತಕ್ಕದ್ದು.

i. ಮುಂದಿನ ಹೆಚ್ಚುವರಿ ಘಟಕದ (Yield of next higher unit) ಇಳುವರಿ ಮಾಹಿತಿಯನ್ನು ಪರಿಗಣಿಸುವುದು.

ii. ಅಕ್ಕಪಕ್ಕದಲ್ಲಿ ಹೆಚ್ಚು ಹೊಂದಾಣಿಕೆ ಇರುವ ವಿಮಾ ಘಟಕದ ಇಳುವರಿಯನ್ನು ಪರಿಗಣಿಸುವುದು. ಸದರಿ ಅಂಶವನ್ನು ಪರಿಗಣಿಸುವಾಗ ಕೃಷಿ ಆಯುಕ್ತರು ಹೊರಡಿಸಿದ ಸುತ್ತೋಲೆ ಸಂಖ್ಯೆ: JDA(CI)/PMFBY/2025Kharif notification /4/2025-26, ದಿನಾಂಕ:07.05.2025 ರಂತೆ ಕ್ರಮ ಕೈಗೊಳ್ಳುವುದು. **(ಅನುಬಂಧ-8)**

41. ಅಧಿಸೂಚಿತ ವಿಮಾ ಘಟಕದಲ್ಲಿ ಯಾವುದೇ ಬೆಳೆಗೆ ನಿಗದಿಪಡಿಸಿದ ಸಂಖ್ಯೆಯ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಸಾಧ್ಯವಾಗದಿದ್ದಲ್ಲಿ ಅಕ್ಕಪಕ್ಕದಲ್ಲಿ ಹೆಚ್ಚು ಹೊಂದಾಣಿಕೆ

ಇರುವ ಹಾಗೂ ಗ್ರಾಮ ಪಂಚಾಯಿತಿ / ಹೋಬಳಿಯ ಕೇಂದ್ರ ಭಾಗದಿಂದ ಅತೀ ಹೆಚ್ಚು ಹತ್ತಿರವಿರುವ (Rank-1) ವಿಮಾ ಘಟಕದ ಇಳುವರಿಯನ್ನು ಪರಿಗಣಿಸಿ ಬೆಳೆ ವಿಮಾ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲಾಗುವುದು.

ವಿ.ಸೂ: ಮುಂದಿನ ಹೆಚ್ಚುವರಿ ಘಟಕದ ಇಳುವರಿಯನ್ನು ಪರಿಗಣಿಸುವಾಗ, ಗ್ರಾಮ ಪಂಚಾಯತಿ ವಿಮಾ ಘಟಕಗಳಿಗೆ ಹೋಬಳಿಗಳನ್ನು ಹಾಗೂ ಹೋಬಳಿ ವಿಮಾ ಘಟಕಗಳಿಗೆ ತಾಲ್ಲೂಕುಗಳನ್ನು ಪರಿಗಣಿಸುವಾಗ, ದಿನಾಂಕ:01.06.2026 ಕ್ಕೆ ಸಂರಕ್ಷಣೆ ತಂತ್ರಾಂಶದ ಮ್ಯಾಪಿಂಗ್ ನಲ್ಲಿರುವಂತೆ ಪರಿಗಣಿಸುವುದು.

42. ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಇವರು ಅಧಿಸೂಚಿತ ಬೆಳೆಗಳಿಗೆ ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಘಟಕವಾರು ಅಂದರೆ, ಹೋಬಳಿವಾರು ಹಾಗೂ ಗ್ರಾಮ ಪಂಚಾಯಿತಿವಾರು ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಯೋಜಿಸತಕ್ಕದ್ದು ಹಾಗೂ ಮೂಲ ಕಾರ್ಯಕರ್ತರುಗಳಿಗೆ ತರಬೇತಿಯ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಯಾವುದಾದರೂ ಘಟಕದಲ್ಲಿ ಒಂದಕ್ಕಿಂತ ಹೆಚ್ಚಿನ ಕೃಷಿ ಹವಾಮಾನ ವಲಯಗಳು ಕಂಡುಬಂದಲ್ಲಿ, ಆ ಘಟಕದಲ್ಲಿ ಕೃಷಿ ಹವಾಮಾನ ವಲಯಗಳು ಹೊಂದಿರತಕ್ಕ ಕ್ಷೇತ್ರಕ್ಕೆ ಅನುಗುಣವಾಗಿ ಬೆಳೆ ಕಟಾವು ಪ್ರಯೋಗಗಳನ್ನು ನಿಗದಿಪಡಿಸತಕ್ಕದ್ದು. ಬೆಳೆವಾರು ಬೆಳೆ ಕಟಾವು ಪ್ರಯೋಗಗಳು ಮುಗಿದ ನಂತರ **ಒಂದು ತಿಂಗಳೊಳಗಾಗಿ** ಬೆಳೆ ಇಳುವರಿ ಮಾಹಿತಿ ಹಾಗೂ ಬಿತ್ತನೆ ಕ್ಷೇತ್ರದ ವಿವರಗಳನ್ನು ಕಡ್ಡಾಯವಾಗಿ *(ಪೂರ್ವ ಮುಂಗಾರು ಬೆಳೆಗಳಿಗೆ ನವೆಂಬರ್ 15 ರೊಳಗೆ ಹಾಗೂ ತೊಗರಿ, ಹತ್ತಿ ಮತ್ತು ಅರಿಶಿನ ಹೊರತುಪಡಿಸಿ ಇತರೆ ಬೆಳೆಗಳಿಗೆ ಜನವರಿ 30 ರೊಳಗೆ)* ದೃಢೀಕೃತ ವರದಿಯನ್ನು ವಿಮಾ ಸಂಸ್ಥೆಗಳಿಗೆ ನೀಡತಕ್ಕದ್ದು. ಅಂತಿಮವಾಗಿ ದೀರ್ಘಾವಧಿ ಬೆಳೆಗಳಾದ ತೊಗರಿ, ಹತ್ತಿ ಹಾಗೂ ಅರಿಶಿನ ಬೆಳೆಯ ಬೆಳೆ ಇಳುವರಿ ಮಾಹಿತಿ ಹಾಗೂ ಬಿತ್ತನೆ ಕ್ಷೇತ್ರದ ವಿವರಗಳನ್ನು ಕ್ರಮವಾಗಿ ದಿನಾಂಕ:31.03.2027 ಹಾಗೂ ದಿನಾಂಕ:05.04.2027 ರೊಳಗೆ ದೃಢೀಕೃತ ವರದಿಯನ್ನು ವಿಮಾ ಸಂಸ್ಥೆಗಳಿಗೆ ನೀಡತಕ್ಕದ್ದು. ಕೆಲವೊಮ್ಮೆ ತಡವಾಗಿ ಬಿತ್ತನೆಯಾದ ಬೆಳೆಗಳಲ್ಲಿ ಕಟಾವು ದಿನಾಂಕದ ಅನುಗುಣವಾಗಿ ಇಳುವರಿಯನ್ನು ಅಂತಿಮಗೊಳಿಸಲಾಗುವುದು.

43. 2026-27ರ ಮುಂಗಾರು ಹಂಗಾಮಿನಲ್ಲಿ ಅಧಿಸೂಚಿಸಿರುವ ಬೆಳೆಗಳಡಿ ಬೆಳೆ ಕಟಾವು ಪ್ರಯೋಗಗಳ ಫಲಿತಾಂಶ ಲಭ್ಯವಿರುವ ಎಲ್ಲಾ ಬೆಳೆಗಳಿಗೆ ವಿಮಾ ಸಂಸ್ಥೆಗಳು ಮುಂದಿನ ವರ್ಷದ ಮಾರ್ಚ್ ಮಾಹೆಯ ಅಂತ್ಯದೊಳಗೆ ಲೆಕ್ಕ ಹಾಕಲಾದ ಬೆಳೆ ವಿಮಾ ನಷ್ಟ ಪರಿಹಾರವನ್ನು ಬೆಳೆ ವಿಮೆಗೆ ನೋಂದಾಯಿಸಿದ ರೈತರಿಗೆ ಇತ್ಯರ್ಥಪಡಿಸತಕ್ಕದ್ದು.

44. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿಯನ್ವಯ ಬೆಳೆ ಕಟಾವು ಪ್ರಯೋಗಗಳನ್ನು ಮೊಬೈಲ್ ಆ್ಯಪ್ ಮೂಲಕ ಕೈಗೊಳ್ಳುವ ಕುರಿತು ಎಲ್ಲಾ ಮೂಲ ಕಾರ್ಯಕರ್ತರಿಗೆ ಸೂಕ್ತ ತರಬೇತಿಯನ್ನು ನೀಡಲು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆರವರು ಕ್ರಮವಹಿಸತಕ್ಕದ್ದು.

45. ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳುವ ಕುರಿತು ಅನುಷ್ಠಾನ ವಿಮಾ ಸಂಸ್ಥೆಗಳಿಗೆ ಕಡ್ಡಾಯವಾಗಿ ಮಾಹಿತಿ ನೀಡಿ, ವಿಮಾ ಸಂಸ್ಥೆಯವರು ಬೆಳೆ ಕಟಾವು ಪ್ರಯೋಗಗಳಲ್ಲಿ ಹಾಜರಾಗುವಂತೆ ಹಾಗೂ ಬೆಳೆ ಕಟಾವು ಪ್ರಯೋಗಗಳಲ್ಲಿ ಪಾರದರ್ಶಕತೆ ಇರುವಂತೆ ಜಿಲ್ಲಾಡಳಿತಗಳು ಕ್ರಮವಹಿಸತಕ್ಕದ್ದು. ಅನುಷ್ಠಾನ ವಿಮಾ ಸಂಸ್ಥೆಗಳೂ ಸಹ CCE Co-witness App ನೀಡುವುದು ಹಾಗೂ ಈ ಕುರಿತು ಸೂಕ್ತ ತರಬೇತಿಯನ್ನು ಅನುಷ್ಠಾನ ವಿಮಾ ಸಂಸ್ಥೆಗಳಿಗೆ ಆರ್ಥಿಕ ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು ನೀಡತಕ್ಕದ್ದು.

46. 2023-24ರ ಮುಂಗಾರು ಹಂಗಾಮಿನಿಂದ ಬೆಳೆ ಇಳುವರಿ ನಷ್ಟದ ಮೌಲ್ಯಮಾಪನಕ್ಕಾಗಿ ಹಾಗೂ ಇಳುವರಿ ಅಂದಾಜುಗಳ ಸುಧಾರಣೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದ ಪತ್ರ

ಸಂಖ್ಯೆ:11019/01/2022-Cr-II (FTS:111875) ದಿ:03.04.2023 ರಲ್ಲಿ ತಿಳಿಸಿದಂತೆ, MNCFC ರವರು ಸೂಚಿಸಿರುವ ಐದು ಮಾದರಿಗಳ ಪೈಕಿ ಒಂದು ಮಾದರಿಯನ್ನು ಅನುಷ್ಠಾನ ಮಾಡಲು ಮುಂಗಾರು 2026 ರಲ್ಲಿ ಭತ್ತ(ನೀರಾವರಿ) ಬೆಳೆಗೆ ಹಾಗೂ ಸೋಯಾ ಅವರೆ (ಮಳೆಯಾಶ್ರಿತ) ಬೆಳೆಗೆ Yield Estimation System Based on Technology (YES-TECH) ತಂತ್ರಜ್ಞಾನ ಅಳವಡಿಸುವ ಮೂಲಕ ಬೆಳೆ ನಷ್ಟ ಇಳುವರಿಯನ್ನು ಅಂದಾಜಿಸಲಾಗುವುದು. ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯು Technology Implementation Partner (TIP) ಆಗಿ ಹಾಗೂ NRSC, RRSC-South ಬೆಂಗಳೂರು ರವರು Mentor Institute for Technology Review (MITR) ಆಗಿ ಕಾರ್ಯನಿರ್ವಹಿಸುವ ಮೂಲಕ YES-TECH ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೇ, ಕೇಂದ್ರ ಸರ್ಕಾರದ MNCFC ಸಂಸ್ಥೆಯು ಕಾಲಕಾಲಕ್ಕೆ ಹೊರಡಿಸುವ ಯಾವುದೇ ಸ್ಪಷ್ಟೀಕರಣಗಳು, ಅಧಿಸೂಚನೆ ಮತ್ತು ಸುತ್ತೋಲೆ ಇತ್ಯಾದಿಗಳಿಗೆ ಎಲ್ಲಾ ಅನುಷ್ಠಾನ ವಿಮಾ ಸಂಸ್ಥೆಯವರು ಹಾಗೂ ಯೋಜನೆ ಅನುಷ್ಠಾನದ ಎಲ್ಲಾ ಸಹಭಾಗಿದಾರರು ಬದ್ಧರಾಗಿರತಕ್ಕದ್ದು.

ರಾಜ್ಯ ಮಟ್ಟದಲ್ಲಿ ರಚಿಸಲಾದ YES-TECH ಸಮಿತಿಯ ತೀರ್ಮಾನದಂತೆ, ಮಾದರಿ ಆಯ್ಕೆ ಮಾಡಿ, ಇದರನ್ವಯ ಭತ್ತ(ನೀರಾವರಿ) ಬೆಳೆಗೆ 50:50 ಅನುಪಾತದಲ್ಲಿ ಹಾಗೂ ಸೋಯಾ ಅವರೆ (ಮಳೆಯಾಶ್ರಿತ) ಬೆಳೆಗೆ 60:40 ಅನುಪಾತದಲ್ಲಿ ಕ್ರಮವಾಗಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ಇಳುವರಿಗೆ ಹಾಗೂ ತಂತ್ರಜ್ಞಾನ ಅಳವಡಿಸಿ ಬಂದಂತಹ ಇಳುವರಿಗೆ ಆದ್ಯತೆ ನೀಡಿ ಬೆಳೆ ನಷ್ಟ ಇಳುವರಿಯನ್ನು ಲೆಕ್ಕಹಾಕಲಾಗುವುದು ಹಾಗೂ ಬೆಳೆ ವಿಮೆ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.

47. ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಯೋಜನೆಯನ್ನು ಅನುಷ್ಠಾನಗೊಳಿಸಲು ವಿಮಾ ಸಂಸ್ಥೆಗಳು ಕೈಗೊಳ್ಳುವ ಪ್ರಚಾರ, ಪ್ರಕಟಣೆ ಮತ್ತು ತರಬೇತಿ ನೀಡುವಲ್ಲಿ ಸಹಕಾರ ನೀಡತಕ್ಕದ್ದು. ಕೃಷಿ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳು ಪ್ರಸ್ತುತ ಸಾಲು ಹಾಗೂ ಹಂಗಾಮಿನಲ್ಲಿ ಅಧಿಸೂಚಿಸಿರುವ ಬೆಳೆಗಳು ಮತ್ತು ಘಟಕಗಳ ಬಗ್ಗೆ ಬ್ಯಾಂಕುಗಳ, ರೈತ ಸಂಪರ್ಕ ಕೇಂದ್ರಗಳ ಮತ್ತು ಗ್ರಾಮ ಪಂಚಾಯತಿ ಕಚೇರಿಗಳ ಸೂಚನಾ ಫಲಕಗಳ ಮೇಲೆ ಪ್ರಕಟಿಸಿ, ಯೋಜನೆಯ ಕುರಿತು ವ್ಯಾಪಕ ಪ್ರಚಾರವನ್ನು ಕೈಗೊಳ್ಳತಕ್ಕದ್ದು.

48. ಅನುಷ್ಠಾನ ವಿಮಾ ಸಂಸ್ಥೆಗಳು ಅವಶ್ಯಕತೆ ಇದ್ದಲ್ಲಿ, ಸ್ವಂತ ಅಥವಾ ಇತರೆ ಸಂಸ್ಥೆಗಳ ಮೂಲಕ ವಿಮೆಗೆ ನೋಂದಾಯಿಸಿದ ಬಿತ್ತನೆ ಕ್ಷೇತ್ರ ಮತ್ತು ಬೆಳೆಗಳ ಪರಿಸ್ಥಿತಿಯ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಉಪಗ್ರಹ ಆಧಾರಿತ ಮಾಹಿತಿಯನ್ನು ಬಳಸಿಕೊಳ್ಳಬಹುದು.

49. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನ ವಿಮಾ ಸಂಸ್ಥೆಗಳು ಬೆಳೆ ವಿಮಾ ಯೋಜನೆಯಲ್ಲಿ ಭಾಗವಹಿಸುವ ವಿವಿಧ ಸಂಸ್ಥೆಗಳ ಜೊತೆಯಲ್ಲಿ ಸಮನ್ವಯ ಸಾಧಿಸತಕ್ಕದ್ದು.

50. 2026-27ನೇ ಸಾಲಿನ ಮುಂಗಾರು ಹಂಗಾಮಿನಿಂದ ಅನ್ವಯವಾಗುವಂತೆ ಬೆಳೆ ವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯ ವರದಿಯೊಂದಿಗೆ ಹೋಲಿಸಿ ಬೆಳೆ ವಿಮೆ ಇತ್ಯರ್ಥಪಡಿಸುವ ಕುರಿತು ಹೊರಡಿಸಲಾಗುವ ಸರ್ಕಾರದ ಆದೇಶದಂತೆ, ಅನುಷ್ಠಾನಗೊಳಿಸುವುದು.

51. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಹೋಬಳಿಗಳನ್ನು ಅನುಬಂಧ-**3** ರಲ್ಲಿ 1, 2, 3 ಅಥವಾ Iನೇ ವಲಯ, IIನೇ ವಲಯ ಮತ್ತು IIIನೇ ವಲಯಗಳನ್ನಾಗಿ ವಿಂಗಡಿಸಿದ್ದು, ಬೆಳೆ ವಿಮೆಯನ್ನು ಅನುಷ್ಠಾನಗೊಳಿಸಲು ಈ

ವಿಂಗಡಿಸಿರುವ ಹೋಬಳಿಗಳ ಮೂಲ ಹೋಬಳಿಗಳನ್ನು ಒಂದು ವಿಮಾ ಘಟಕವೆಂದು ಪರಿಗಣಿಸತಕ್ಕದ್ದು.

**ಉದಾಹರಣೆ:** ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಕಸಬಾ ಹೋಬಳಿಯು ಕಸಬಾ-1 ಮತ್ತು ಕಸಬಾ - 2 ಎಂದು ವಿಂಗಡಿಸಿದ್ದು, ಬೆಳೆ ವಿಮೆಯನ್ನು ಅನುಷ್ಠಾನಗೊಳಿಸಲು ಈ ವಿಂಗಡಿಸಿರುವ ಹೋಬಳಿಯನ್ನು ಕಸಬಾ ಎಂದು ಒಂದು ವಿಮಾ ಘಟಕವೆಂದು ಪರಿಗಣಿಸುವುದು.

51(a). ಅನುಬಂಧ-2 ರಲ್ಲಿ ಧಾರವಾಡ ಜಿಲ್ಲೆಯ ಧಾರವಾಡ (ULB) ಹೋಬಳಿಯನ್ನು ಧಾರವಾಡ(ULB)-1, ಧಾರವಾಡ(ULB)-2 ಮತ್ತು ಧಾರವಾಡ(ULB)-3 ಎಂದು ವಿಂಗಡಿಸಿದ್ದು, ಹುಬ್ಬಳ್ಳಿ(ULB) ಹೋಬಳಿಯನ್ನು, ಹುಬ್ಬಳ್ಳಿ(ULB)-1, ಹುಬ್ಬಳ್ಳಿ(ULB)-2 ಮತ್ತು ಹುಬ್ಬಳ್ಳಿ(ULB)-3 ಎಂದು ವಿಂಗಡಿಸಿದ್ದು, ಈ ವಿಂಗಡಿಸಿರುವ ಹೋಬಳಿಗಳನ್ನು ಪ್ರತ್ಯೇಕ ವಿಮಾ ಘಟಕಗಳೆಂದು ಪರಿಗಣಿಸತಕ್ಕದ್ದು.

52. ಮೇಲೆ ಸೂಚಿಸಿದ ಯಾವುದೇ ಅಂಶಗಳಿಗೆ ಸಂಬಂಧಿಸಿದಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿ ಅಥವಾ ನಿರ್ದೇಶನದನ್ವಯ ಬದಲಾವಣೆಗಳನ್ನು ಅಳವಡಿಸಿಕೊಂಡು, ರಾಜ್ಯದಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಎಲ್ಲಾ ಸಹಭಾಗಿತ್ವ ಸಂಸ್ಥೆಗಳು/ಇಲಾಖೆಗಳು ಕ್ರಮಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

P. Satya 13/06/2016

(**ಪಿ. ಸತ್ಯಭಾಮ**)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಸಂಕಲನಾಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು ಹಾಗೂ 10 ಪ್ರತಿಗಳನ್ನು ಕರ್ನಾಟಕ ಸರ್ಕಾರದ ಸಚಿವಾಲಯದ ಕೃಷಿ ಇಲಾಖೆ (ಯೋಜನೆ-ಬಿ) ಶಾಖೆ, 3ನೇ ಹಂತ, 4ನೇ ಮಹಡಿ, ಬಹುಮಹಡಿಗಳ ಕಟ್ಟಡ ಇಲ್ಲಿಗೆ ಒದಗಿಸಲು ಕೋರಿದೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01
2. ಪ್ರಧಾನ ಮಹಾಲೇಖಪಾಲರು (A &E), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ರಾಜ್ಯದ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.
4. ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ. ಬೆಂಗಳೂರು.
5. ತೋಟಗಾರಿಕಾ ಆಯುಕ್ತರು / ನಿರ್ದೇಶಕರು, ಬೆಂಗಳೂರು.
6. ಕೃಷಿ ನಿರ್ದೇಶಕರು, ಬೆಂಗಳೂರು.
7. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
8. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

9. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

10. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.

11. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು

12. ಎಲ್ಲಾ ಜಿಲ್ಲಾ ತೋಟಗಾರಿಕಾ ಉಪ ಕೃಷಿ ನಿರ್ದೇಶಕರು

13. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.

14. ಎಲ್ಲಾ ಲೀಡ್ ಬ್ಯಾಂಕುಗಳು.

15. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು.

16. ಎಲ್ಲಾ ನೋಡಲ್ ಬ್ಯಾಂಕುಗಳು.

17. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು.

18. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು – 560 009.

19. ಅನುಷ್ಠಾನ ವಿಮಾ ಸಂಸ್ಥೆಗಳು.

20. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.

21. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ/ಭೂಮಿ & ಯುಪಿಓಆರ್/ಎಸ್ಎಸ್ಎಲ್ಆರ್), ಬೆಂಗಳೂರು.

22. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.

23. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 3, 9 ರಿಂದ 11, 18, 19 ರವರೆಗೆ ಕೃಷಿ ನಿರ್ದೇಶಕರ ಮೂಲಕ, ಕ್ರಮ ಸಂಖ್ಯೆ:12 ತೋಟಗಾರಿಕಾ ಆಯುಕ್ತರು / ನಿರ್ದೇಶಕರ ಮೂಲಕ, ಕ್ರಮ ಸಂಖ್ಯೆ:13 ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರ ಮೂಲಕ, ಕ್ರಮ ಸಂಖ್ಯೆ:14, 15 & 16 ರವರೆಗೆ– ಎಸ್.ಎಲ್.ಬಿ.ಸಿ. ಮೂಲಕ ಹಾಗೂ ಕ್ರಮ ಸಂಖ್ಯೆ: 17 – ಅಪೆಕ್ಸ್ ಬ್ಯಾಂಕ್‌ನ ಮೂಲಕ).

******